


## ವಾಟ್ಸ್‌ಆ್ಯಪ್ ಕಾಲಿಂಗ್‌ಗೆ ವೈಸ್‌ಮೇಲ್

ವಾಟ್ಸ್‌ಆ್ಯಪ್ ಬಳಕೆದಾರರು ನಿಮ್ಮ ಕರೆಯನ್ನು ತಿರಸ್ಕರಿಸಿದರೆ ಅಥವಾ ತೆಗೆದುಕೊಳ್ಳದಿದ್ದರೆ ಅವರಿಗೆ ವೈಸ್‌ಮೇಲ್ ಕಳಿಸುವ ಸೌಲಭ್ಯವನ್ನು ಆ್ಯಂಡ್ರಾಯ್ಡ್ ಹಾಗೂ ಐಒಎಸ್ ಬಳಕೆದಾರರಿಗೆ ನೀಡಲಾಗಿದೆ. ಕಾಲ್ ಸ್ಕ್ರೀನ್ ಮೇಲೆ ವೈಸ್‌ಮೇಲ್ ರೆಕಾರ್ಡ್ ಮಾಡಿ ಕಳಿಸಬಹುದು. ಈ ವೈಸ್‌ಮೇಲ್ ಅನ್ನು ಅವರ ಚ್ಯಾಟ್ ಸ್ಕ್ರೀನ್ ಮೇಲೆ ವೈಸ್ ಮೆಸೇಜ್‌ನಂತೆ ಕಳಿಸುವಾಗ ಮೈಕ್ರೋಫೋನ್ ಆನ್ ಮಾಡುವಂತೆ ಸಂದೇಶ ಬರುತ್ತದೆ. ವಾಟ್ಸ್‌ಆ್ಯಪ್ ಬಳಕೆದಾರರು ನಿತ್ಯ ಕೋಟಿಗಟ್ಟಲೆ ಕರೆಗಳನ್ನು ಮಾಡುತ್ತಿದ್ದು ಇದು ಅವರಿಗೆ ವರದಾನವಾಗಲಿದೆ ಎಂದು ವಾಟ್ಸ್‌ಆ್ಯಪ್ ಹೇಳಿಕೊಂಡಿದೆ.

## ಇನ್‌ಸ್ಟಾಗ್ರಾಂ 6

ಐಫೋನ್‌ನ ಈ ಆ್ಯಪ್ ಕೊನೆಗೂ ಲ್ಯಾಂಡ್‌ಸ್ಕೇಪ್ ಹಾಗೂ ಪೋರ್ಟ್‌ರೈಟ್ ಚಿತ್ರಗಳನ್ನು ಬೆಂಬಲಿಸುವ ಸೌಲಭ್ಯವನ್ನು ನೀಡಿದೆ. ಅತ್ಯುತ್ತಮವಾದ ಹಾಗೂ ಹೊಂದಾಣಿಕೆ ಮಾಡಬಲ್ಲಂತಹ ಫೋಟೊ ಹಾಗೂ ವಿಡಿಯೊ ಫಿಲ್ಟರ್‌ಗಳಿವೆ. ಫೋಟೊ ಹಂಚಿಕೊಳ್ಳುವ ಅಂಶವಿದ್ದು, ವಿಡಿಯೊ ಶೂಟಿಂಗ್, ಎಡಿಟಿಂಗ್ ಸವಲತ್ತು ಚೆನ್ನಾಗಿದೆ. ಇತರ ಬಳಕೆದಾರರ ಜೊತೆ ಖಾಸಗಿಯಾಗಿ ಕೂಡಾ ಫೋಟೊ ಹಂಚಿಕೊಳ್ಳಬಹುದು. ಇದು ಒಂದೇ ದಿನಕ್ಕೆ ಮಾಯವಾದರೂ ಕೂಡಾ ದಿವೊಂದಕ್ಕೆ 80 ದಶಲಕ್ಷ ಚಿತ್ರಗಳು ಹಾಗೂ ವಿಡಿಯೋಗಳನ್ನು ಶೇರ್ ಮಾಡಬಹುದು. ಇದರಲ್ಲಿರುವ ಪ್ರಿಸ್ಮಾ ಸೌಲಭ್ಯದಿಂದ ನಿಮ್ಮ ಫೋಟೋವನ್ನು ಪಿಕಾಸೊ ಅಥವಾ ವ್ಯಾನ್ ಗೋ ತರಹ ಮಾಡಿಕೊಳ್ಳಬಹುದು.



## ಎವರ್‌ನೋಟ್ 5.0




ಎವರ್‌ನೋಟ್‌ನ ಆ್ಯಂಡ್ರಾಯ್ಡ್ ಆ್ಯಪ್‌ನ ಆವೃತ್ತಿ 5 ಲಭ್ಯವಿದ್ದು, ಹೊಸ ಹೊಸ ಸವಲತ್ತುಗಳನ್ನು ಹೊಂದಿದೆ. ಹಲವು ಉಚಿತ ಸೇವೆಗಳಿದ್ದು, ಈ ಆ್ಯಪ್ ಕ್ಯಾಮೆರಾ ಹಾಗೂ ಫೋಟೊ ಅಪ್‌ಲೋಡ್ ಮಾಡುವ ಹತ್ತಾರು ಸೌಲಭ್ಯಗಳನ್ನು ಹೊಂದಿದೆ. ಬ್ಯುಸಿನೆಸ್ ಕಾರ್ಡ್ ಅಥವಾ ಇತರ ದಾಖಲೆಗಳ ಛಾಯಾಚಿತ್ರ ತೆಗೆದಾಗ ಅವುಗಳನ್ನು ಸ್ವಯಂಚಾಲಿತವಾಗಿ ಫೈಲ್‌ಗಳನ್ನಾಗಿ ಕಾದಿಡಬಹುದು. ಇದರಲ್ಲಿ ನಾಲ್ಕು ರೀತಿಯ ಸೇವೆಗಳು ಲಭ್ಯ. ಬೇಸಿಕ್ (ಉಚಿತ), ಪ್ಲಸ್, ಪ್ರೀಮಿಯಮ್ ಹಾಗೂ ಬ್ಯುಸಿನೆಸ್. ಉಚಿತ ಬಳಕೆದಾರರು ಎರಡು ಸಾಧನಗಳನ್ನು ಮಾತ್ರ ಸಿಂಕ್ ಮಾಡಬಹುದು. ಸಂಗ್ರಹ ಸಾಮರ್ಥ್ಯ ಕೂಡಾ ತಿಂಗಳಿಗೆ 60 ಎಂಬಿ. ಉಳಿದವರಿಗೆ ಒಂದು ಜಿಬಿ ಸಂಗ್ರಹ ಸಾಮರ್ಥ್ಯವನ್ನು ನೀಡಲಾಗುವುದು. ಹೊಸ ಆವೃತ್ತಿಯಲ್ಲಿ ಲಾಕಿಂಗ್ ಕೋಡ್ ಸೌಲಭ್ಯ ಕೂಡಾ ಇದೆ.

## ಐಎಫ್‌ಟಿಟಿಟಿಯ ಡೂ ಆ್ಯಪ್

ಸ್ಮಾರ್ಟ್‌ಫೋನ್‌ನಲ್ಲಿ ನಿತ್ಯ ಮಾಡುವ ಹಲವು ಕೆಲಸಗಳನ್ನು ಡೂ ಬಟನ್, ಡೂ ಕ್ಯಾಮೆರಾ ಹಾಗೂ ಡೂ ನೋಟ್ ಆ್ಯಪ್‌ಗಳು ಸುಲಭವಾಗಿಸಿವೆ. ಉದಾಹರಣೆಗೆ ಒಂದು ಚಿತ್ರವನ್ನು ಫೇಸ್‌ಬುಕ್‌ಗೆ ಅಪ್‌ಲೋಡ್ ಮಾಡಬೇಕು ಎಂದಿಟ್ಟುಕೊಳ್ಳಿ. ಈ ಕೆಲಸವನ್ನು ಮಾಡಲು ಒಂದು ಬಟನ್‌ನಲ್ಲಿ ಪ್ರೋಗ್ರಾಂ ಮಾಡಿಟ್ಟು ಅದನ್ನು ಒತ್ತಿದರೆ ಸಾಕು, ನಿಮ್ಮ ಕೆಲಸವನ್ನು ಅದು ಮಾಡುತ್ತದೆ. ಸ್ಮಾರ್ಟ್‌ಫೋನ್ ಕೆಲಸಗಳು ನಿಮ್ಮ ಸಮಯವನ್ನು ಹಾಳು ಮಾಡಲಾರವು. ಆದರೆ ಕೆಲವೊಂದು ಹಂತಗಳಲ್ಲಿ ಮಾಡಬೇಕಾಗುತ್ತದೆ. ಅಂದರೆ ಆ್ಯಪ್ ತೆರೆದು, ಅದರಲ್ಲಿರುವ ಸವಲತ್ತುಗಳನ್ನು ಹುಡುಕಿ, ನಂತರ ನಿಮಗೆ ಬೇಕಾದ ಕೆಲಸವನ್ನು ಮಾಡಬೇಕಾಗುತ್ತದೆ. ಆದರೆ ಡೂ ಆ್ಯಪ್‌ನಲ್ಲಿ ಈ ಹಲವು ಕ್ರಿಯೆಗಳನ್ನು ಮಾಡುವ ಬದಲು ಎಲ್ಲವನ್ನೂ ಕ್ರೋಢೀಕರಿಸಿ ಒಂದೇ ಸಲ ಬಟನ್ ಒತ್ತಿದರೆ ಸಾಕು.

